ಮನೆ ಸಿದ್ಧವಾಯಿತು. ಇನ್ನು ಮಗಳನ್ನು ಸತ್ಕರಿಸುವುದು ಹೇಗೆ? ಎಲ್ಲಾ ತಾಯಿಯರಂತೆ ಪದ್ಮಾರಿಗೂ ಅನ್ನಿಸಿದ್ದು – ಒಳ್ಳೆಯ, ರುಚಿರುಚಿಯಾದ ಅಡಿಗೆ ಮಾಡಬೇಕು. ಮಂಗಳವಾರ, ಮಗಳು ಬರುವುದಕ್ಕೆ ಎರಡು ದಿನ ಮುಂಚೆ, ಪ್ರಾರಂಭಿಸಿದರು. ಮೆನ್ಯೂ ಬಿಸಿಬೇಳೆ ಬಾತ್, ಅನ್ನ, ಸಾರು, ಆಂಬೊಡೆ, ಹೋಳಿಗೆ, ಜೊತೆಗೆ ಕ್ಯಾರಟ್ ಕೋಸಂಬರಿ, ಹಪ್ಪಳ, ಸಂಡಿಗೆ ಇತ್ಯಾದಿ. ಗುಜರಾತಿ ಹೆಂಗಸೊಬ್ಬಳ ಸಹಾಯ ತೆಗೆದುಕೊಂಡು ಅಡಿಗೆಯನ್ನು ಮುಗಿಸಿದರು.

ವಾರ ಬಂತಮ್ಮ. ಗುರುವಾರ ಬಂತಮ್ಮ. ಬೆಳಗ್ಗೆಯಿಂದಲೇ ಮಗಳ ಫೋನಿಗಾಗಿ ಕಾದು ಕುಳಿತರು. ಹನ್ನೊಂದರ ವೇಳೆಗೆ ಕರೆ ಬಂದಿತು. "ಅಮ್ಮಾ ಈಗ ತಾನೇ ಸಿಡ್ನಿಯಲ್ಲಿ ಲ್ಯಾಂಡ್ ಆಗಿದ್ದೀವಿ. ಅನಿಲ್ ಏರ್ಪೋರ್ಟಿಗೆ ಬಂದಿದ್ದ. ಸಾಕಷ್ಟು ಮಾತಾಡಿದೆವು. ಇಲ್ಲೇ ಹೋಟೆಲಿನಲ್ಲಿ ಕಾಫಿ ಆಯಿತು. ಸಂಜೆ ಐದರ ಹೊತ್ತಿಗೆ ಮನೆಗೆ ಬರುತ್ತೇವೆ. ಇಲ್ಲಿ ಸ್ವಲ್ಪ ಕಾನ್ಫರೆನ್ಸ್ ಕೆಲಸ ಇದೆ." ವರ್ತಮಾನ ಯಜಮಾನರಿಗೆ ಹೋಯಿತು. ಅವರು ಅಷ್ಟು ಹೊತ್ತಿಗೆ ತಮ್ಮ ದವಾಖಾನೆಯನ್ನು ಮುಚ್ಚಿ ಬರುವುದಾಗಿ ಹೇಳಿದರು.

ಸಂಜೆ ಐದಕ್ಕೆ ಗಂಡ ಹೆಂಡತಿ ಮಗಳು ಮತ್ತು ಅವಳ ಗೆಳೆಯ ಆಲ್ಬರ್ಟ್‌ಗಾಗಿ ಕಾದು ಕುಳಿತರು. ಅರ್ಧಗಂಟೆ ತಡವಾಗಿ ಇಬ್ಬರೂ ಕಾರಿನಲ್ಲಿ ಬಂದಿಳಿದರು. ಪದ್ಮಾ ಮತ್ತು ರವಿಶಂಕರ್ ನೋಡಿ ದಿಗ್ಭ್ರಮೆಯಾಗಿ ನಿಂತರು. ಹರಕು ಜೀನ್ಸ್ ತೊಟ್ಟು, ತನ್ನ ಕೂದಲನ್ನು ಅರ್ಧಕ್ಕೆ ಕತ್ತರಿಸಿಕೊಂಡಿದ್ದ ಮಗಳು! ಇಲ್ಲಿಂದ ಹೊರಟಾಗ ಎಷ್ಟು ಮುದ್ದಾಗಿದ್ದಳು. ಈಗ ಮಧ್ಯವಯಸ್ಕ ಹೆಂಗಸಾಗಿ ಕಾಣುತ್ತಾಳೆ. ಬಂದವಳೇ ತಂದೆ ತಾಯಿಯರನ್ನು ತಬ್ಬಿಕೊಂಡಳು. "ಇವನು ಆಲ್ಬರ್ಟ್" ಎಂದಳು. ಅವನೂ ಇಬ್ಬರನ್ನೂ ನೋಡಿ ನಕ್ಕು "ಹಾಯ್" ಎಂದ. ತಾಯಿ ಕೇಳಿದರು –

"ಹುಷಾರಾಗಿದಿಯೇನೇ? ಫ್ಲೈಟ್ ಹೇಗಿತ್ತು? ಆಯಾಸ ಆಯ್ತಾ?"

"ಏಕಮ್ಮಾ ಹೀಗೆ ಕೇಳ್ತೀಯಾ? ಹುಷಾರಾಗಿದೀನಿ. ಫ್ಲೈಟ್ ಪರವಾಗಿಲ್ಲ."

ಮನೆಯೊಳಗೆ ಬಂದವಳೇ "ಏನಮ್ಮಾ ಇಷ್ಟು ಕ್ಲೀನ್ ಮಾಡಿದ್ದೀಯಾ! ಬೇಕಾಗಿರಲಿಲ್ಲ. ಡ್ಯಾಡೀನ ಗೋಳ್ ಹೊಯ್ಕೊಂಡಿರಬೇಕು ನೀನು." ಎಂದಳು.

"ಏನೂ ಇಲ್ಲ, ಅವರೇನು ಕೆಲಸ ಮಾಡ್ತಾರೆ. ನಿಮ್ಮ ಡ್ಯಾಡಿ ಗೊತ್ತಿಲ್ಲವಾ? ಕೆಲಸದವರನ್ನ ಇಟ್ಟುಕೊಂಡಿದೀನಿ ಈಗ."

ಮುಂದಿನ ಮಾತುಕತೆಯೆಲ್ಲಾ ಅಮೆರಿಕಾ, ಬರ್ಕ್ಲಿಗಳನ್ನು ಕುರಿತದ್ದು.

"ಅಲ್ಲಿ ಊಟ ತಿಂಡಿಗೆ ತೊಂದರೆ ಇಲ್ಲವಾ?"

"ಸ್ವಲ್ಪಾನೂ ಇಲ್ಲ. ನಾವೇ ಅಡಿಗೆ ಮಾಡಿಕೋ ಬಹುದು. ಎಷ್ಟೋ ಸಲ ಕ್ಯಾಂಟೀನಿನಲ್ಲೇ ತಿಂತೀವಿ."

"ಮಾಂಸ ಮಡ್ಡಿ ತಿನ್ನೋದಿಲ್ಲಾ ತಾನೇ."

"ಇಲ್ಲಾ ಅಮ್ಮಾ, ಮುಟ್ಟೋದೇ ಇಲ್ಲ."

ತಂದೆಯವರ ಮುಂದೆಯೇ ಈ ಮಾತುಕತೆ ನಡೆಯುತ್ತಿತ್ತು. ಆಲ್ಬರ್ಟ್ ಬಾತ್‌ರೂಮಿಗೆ ಹೋಗಿದ್ದವನು ಬಂದು ಅನಿತಾಳ ಪಕ್ಕವೇ ಕೂತ, ಮೈಯ್ಯಿಗೆ ಮೈ ಅಂಟಿಸಿಕೊಂಡು. ನೋಡಿ ರವಿಶಂಕರ್ ಮುಖ ಸಿಂಡರಿಸಿಕೊಂಡರು. ಇದನ್ನು ನೋಡಿದ ಪದ್ಮಾ ಕಣ್ಣಿನಲ್ಲಿಯೇ ಸೂಚನೆ ಇತ್ತರು. ಅವರ ಮುಖ ಸ್ವಲ್ಪ ಸಡಿಲವಾಯಿತು.

ಆಲ್ಬರ್ಟ್ ತನ್ನ ಬಗ್ಗೆ ಹೇಳಿಕೊಂಡ. ಅವನ ತಂದೆ ತಾಯಿ ಇಬ್ಬರೂ ಉಪಾಧ್ಯಾಯರುಗಳು, ಮಯಾಮಿಯ ಹೈಸ್ಕೂಲ್ ಒಂದರಲ್ಲಿ. ಅವರ ಮನೆಯಲ್ಲಿ ವಿದ್ಯೆಗೆ ಗೌರವ, ಹಣದ ಬಗ್ಗೆ ನಿರ್ಲಕ್ಷ್ಯ ಎಂದರೂ ಸರಿ. ಪಿಎಚ್.ಡಿ. ಪಡೆದ ಮೇಲೆ ಯಾವುದಾದರೂ ವಿಶ್ವವಿದ್ಯಾಲಯ ಅಥವಾ ಯಾವುದಾದರೂ ಪ್ರಯೋಗಾಲಯದಲ್ಲಿ ಸಂಶೋಧನೆ ಮುಂದುವರೆಸುವ ಹಂಬಲ. ಸ್ಟೆಮ್ ಸೆಲ್ ಸಂಶೋಧನೆಗೆ ಬಹಳ ಬೆಲೆ ಇದೆ ಈಗ. ಅನಿತಾ ತೊಡಗಿರುವುದೂ ಇದೇ ಅಧ್ಯಯನದಲ್ಲಿ.